ದಿಃ26.05.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟಿ ಸವಾಲುಃ 1 ರಿಂದ 5 ನೇ ಪ್ರತಿವಾದಿ ಪರ ಶ್ರೀ ಬಿ ಆರ್ ಪಿ ವಕೀಲರಿಂದ ,</u>**

1. 1 ನೆ ಮತ್ತು 2 ನೆ ವಾದಿಗಳು ನನ್ನ ತಂದೆ ತಾಯಿ ಇರುತ್ತಾರೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಕುಟುಂಬಕ್ಕೆ 3 ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಅಡಿಕೆ ಬೆಳೆ ಬೆಳೆದಿರುತ್ತೇವೆ. ಸದರಿ ಜಮೀನನ್ನು ನನ್ನ ತಂದೆ ಖರೀದಿಸಿದ್ದರು. ಸದರಿ ಜಮೀನು ಕಂಬದಾಳ್ ಹೊಸೂರು ಗ್ರಾಮದಲ್ಲಿದೆ. ನನ್ನ ತಂದೆ ತಾಯಿಗೆ 4 ಜನ ಮಕ್ಕಳು ಇರುತ್ತಾರೆ. ಅವರಲ್ಲಿ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ ಅವರ ಮದುವೆ ಆಗಿರುತ್ತದೆ. ನಾವು ಇಬ್ಬರು ಗಂಡು ಮಕ್ಕಳು ವ್ಯವಸಾಯ ಮಾಡುತ್ತೇವೆ. ನನ್ನ ಅಣ್ಣ ಈ ಮೊದಲು ತಾಲ್ಲೂಕು ಪಂಚಾಯಿತಿ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ದಾವಾ ಸ್ವತ್ತನ್ನು ನಾನು ನೋಡಿರುತ್ತೇನೆ. ಸ. ನಂಃ 42 ರಲ್ಲಿ 534 ಎಕರೆಗಿಂತ ಜಾಸ್ತಿ ಜಮೀನು ಇರುತ್ತದೆ. ಸ. ನಂಃ 42 ರಲ್ಲಿ ಸಾಕಷ್ಟು ಜನ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಬಗ್ಗೆ ನನಗೆ ಗೊತ್ತಿಲ್ಲ. ಸ. ನಂಃ 42 ರೆವಿನ್ಯೂ ಲ್ಯಾಂಡ್ ಆಗಿರುತ್ತದೆ, ಆದರೆ ನಿರ್ಧಿಷ್ಟವಾಗಿ ಗೊತ್ತಿರುವುದಿಲ್ಲ.

2. ಪ್ರತಿವಾದಿಗಳು ಸಮಾರು 30-40 ವರ್ಷಗಳಿಂದ ಪರಿಚಯ ಇರುತ್ತಾರೆ. ದಾವಾ ಸ್ವತ್ತನ್ನು ಅಬ್ದುಲ್ ಕರೀಂ ರವರು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ . ಬಗರ್‌ಹುಕುಂ ಸಾಗುವಳಿ ಮಾಡುವವರಿಗೆ ಸರ್ಕಾರ ಜಮೀನನ್ನು ಮಂಜೂರು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಅಬ್ದುಲ್ ಕರೀಂ ರವರಿಗೆ 1999 ರಲ್ಲಿ ಅವರು ಸಾಗುವಳಿ ಮಾಡುತ್ತಿದ್ದ ದಾವಾಸ್ವತ್ತು ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸರಿ . ಅದರಂತೆ ಅವರಿಗೆ ಸಾಗುವಳಿ ಚೀಟಿ 302/1998-99 ಮಂಜೂರಾಗಿರುತ್ತದೆ ಎಂದರೆ ಸರಿ. ಸರ್ಕಾರದಿಂದ ಮಂಜೂರಾದ ಜಮೀನು 15 ವರ್ಷಗಳವರೆಗೆ ಪರಭಾರೆ ಮಾಡಬಾರದು ಎಂದು ಶರತ್ತು ವಿಧಿಸಲಾಗಿದೆ ಎಂದರೆ ಸರಿ . ನಾನು

4 ನೆ ತರಗತಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. 15 ವರ್ಷ ಪರಭಾರೆ ಮಾಡಬಾರದು ಎಂದು ನಿಯಮ ಯಾವ ಕಾರಣಕ್ಕಾಗಿ ಮಾಡಲಾಗಿದೆ ಎಂದು ಗೊತ್ತಿಲ್ಲ. ಮಾರಾಟ ಮಾಡಬಾರದು ಎನ್ನುವ ಉದ್ದೇಶದಿಂದ ಸರ್ಕಾರ ಈ ನಿಯಮ ಮಾಡಿರುತ್ತದೆ ಎಂದರೆ ಸರಿ.  ಮಂಜೂರಾಗಿರುವ ಜಮೀನು ಕುಟುಂಬದ ಒಳಿತಿಗಾಗಿ ಮಂಜೂರಾಗಿರುತ್ತದೆ ಎಂದರೆ ಸರಿ.

3. ದಾವಾಸ್ವತ್ತು ಅಬ್ದುಲ್‌ಕರೀಂಸಾಬ್ ರವರ  ಒಟ್ಟು ಕುಟುಂಬದ ಆಸ್ತಿ ಹಾಗೂ ಅವರ  ಸ್ವಯಾರ್ಜಿತ ಆಸ್ತಿ  ಎಂದರೆ ಸುಳ್ಳು. ದಾವಾಸ್ವತ್ತು ಮಂಜೂರಾದ ಮೇಲೆ ಪಹಣಿ, ಖಾತೆ ಅಬ್ದುಲ್ ಕರೀಂಸಾಬ್ ರವರ ಹೆಸರಿಗೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಅಬ್ದುಲ್ ಕರೀಂಸಾಬ್ ರವರು ತೀರಿಕೊಂಡ ನಂತರ ಅವರ ವಾರಸುದಾರರು ದಾವಾಸ್ವತ್ತನ್ನು ಸಾಗುವಳಿ ಮಾಡುತ್ತಿದ್ದಾರೆಂದರೆ ಸುಳ್ಳು . ನನ್ನ ಜಮೀನು ಹಾಗೂ ದಾವಾಸ್ವತ್ತು ಒಂದೇ ಊರಿನಲ್ಲಿ ಸ್ವಲ್ಪ ದೂರದಲ್ಲಿ ಇರುತ್ತವೆ. ಅಬ್ದುಲ್ ಕರೀಂಸಾಬ್ ರವರು ದಾವಾಸ್ವತ್ತನ್ನು ಅಭಿವೃದ್ದಿ ಪಡಿಸುವ ಸಲುವಾಗಿ ಸಿಂಡಿಕೇಟ್ ಬ್ಯಾಂಕ್ ಭದ್ರಾವತಿಯಿಂದ ಸಾಲ ಪಡೆದಿರುತ್ತಾರೆ ಎಂದರೆ ಸರಿ .  ಸದರಿ ದಾವಾಸ್ವತ್ತನ್ನು ಅಡಮಾನ ಮಾಡಿ ಸಾಲ ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ಭತ್ತ ಬೆಳೆಯುತ್ತಿದ್ದೇವೆ. ವರ್ಷಕ್ಕೆ ಎರಡು ಭತ್ತದ ಬೆಳೆ ಬರುತ್ತದೆ ಎಂದರೆ ಸರಿಯಲ್ಲ, ಒಂದೇ ಬೆಳೆ ಬರುತ್ತದೆ. ಮಳೆ ನೀರಿನ ಆಧಾರದ ಮೇಲೆ ಸದರಿ ಬೆಳೆ ಬೆಳೆಯುತ್ತೇವೆ.

4. ನನ್ನ ತಂದೆ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಅಬ್ದುಲ್ ಕರೀಂಸಾಬ್ ವಿದ್ಯಾಭ್ಯಾಸ ಮಾಡಿರುವುದಿಲ್ಲ ಎಂದರೆ ಸರಿ.  ಅಬ್ದುಲ್ ಕರೀಂಸಾಬ್ ರವರು ತಮ್ಮ ಜಮೀನಿನ ಸಾಗುವಳಿ ಮಾಡಲು ಹಾಗೂ ಇತರೆ ಖರ್ಚಿಗಾಗಿ ನನ್ನ ತಂದೆಯ ಹತ್ತಿರ ಸಾಲ ಪಡೆಯುತ್ತಿದ್ದರು ಎಂದರೆ ಸರಿ. ಬೆಳೆ ಕಟಾವು ಆದ ಮೇಲೆ ಸಾಲವನ್ನು ಹಿಂತಿರುಗಿಸುತ್ತಿದ್ದರು ಎಂದರೆ ಸರಿ . ಅಬ್ದುಲ್ ಕರೀಂಸಾಬ್ ಹಾಗೂ ನನ್ನತಂದೆಯ ಸಂಬಂಧ ಚೆನ್ನಾಗಿತ್ತು ಎಂದರೆ ಸರಿ .

5. 2010-11 ರಲ್ಲಿ ಹುಣಸೆಕಟ್ಟೆ ಗ್ರಾಮದಲ್ಲಿ 1 ಎಕರೆಗೆ ರೂ.2,20,000/- ರಿಂದ ರೂ.2,40,000/- ಬೆಲೆ ಇತ್ತು. ಆ ಸಮಯದಲ್ಲಿ ಆದ ಕ್ರಯಪತ್ರದ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. 2010-11 ರಲ್ಲಿ ಕುಷ್ಕಿ ಜಮೀನಿಗೆ ಪ್ರತಿ ಎಕರೆಗೆ ರೂ.5,00,000/- ಸರ್ಕಾರದಿಂದ ಬೆಲೆ ನಿಗದಿ ಮಾಡಲಾಗಿತ್ತು ಎಂದರೆ ಸುಳ್ಳು . ಈ ಬಗ್ಗೆ ಉಪ ನೊಂದಣಿ ಕಛೇರಿಯಲ್ಲಿ ದಾಖಲೆ ಲಭ್ಯವಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

6. ದಿಃ 12.07.2010 ರಂದು ದಾವಾಸ್ವತ್ತನ್ನು ಮಾರಾಟ ಮಾಡುವ ಮಾತುಕತೆಗೆ ಕರೀಂಸಾಬ್ ರವರು ಹಾಗೂ ಅವರ ಇಬ್ಬರು ಮಕ್ಕಳು 2 ಮತ್ತು 3 ನೆ ಪ್ರತಿವಾದಿಯವರು ಬಂದಿದ್ದರು. ಸದರಿ ಮಾತುಕತೆ ಅಬ್ದುಲ್ ಕರೀಂಸಾಬ್ ರವರ ಮನೆಯಲ್ಲಿ ಆಗಿರುತ್ತದೆ. ಅಬ್ದುಲ್ ಕರೀಂಸಾಬ್ ರವರಿಗೆ ದಾವಾಸ್ವತ್ತನ್ನು ಹೊರತುಪಡಿಸಿ ಬೇರೆ ಯಾವುದೆ ಜಮೀನು ಇರುವುದಿಲ್ಲ ಎಂದರೆ ಸುಳ್ಳು. ಸ. ನಂಃ 42 ರಲ್ಲಿ ಅವರಿಗೆ 4 ಎಕರೆ ಜಮೀನು ಇರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆ ನಾನು ನೋಡಿರುವುದಿಲ್ಲ ಹಾಗೂ ಅದನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುವುದಿಲ್ಲ. ಜಮೀನಿನ ಬೆಲೆಯನ್ನು ಊರಿನ ಜನರಾದ ಚಂದ್ರಶೇಖರ್, ಸಾಜ್ಜನ್ ಸಾಬ್ , ಹನುಮಂತರಾವ್ ಹಾಗೂ ಶಿವಣ್ಣ ನಿಗದಿಪಡಿಸಿರುತ್ತಾರೆ. ಪ್ರತಿ ಎಕರೆಗೆ ರೂ.2,40,000/- ಬೆಲೆಯಂತೆ 3 ಎಕರೆ ಜಮೀನನ್ನು ಮಾರಾಟ ಮಾಡುವುದಾಗಿ ಮಾತುಕತೆಯಾಗಿರುತ್ತದೆ. ದಿಃ 12.07.2010 ರಂದು ಮಾತುಕತೆ ಮಾತ್ರ ಆಗಿರುತ್ತದೆ. ಆ ದಿನ ಯಾವುದೆ ಹಣ ಸಂದಾಯವಾಗಿರುವುದಿಲ್ಲ . 10-12 ದಿನ ಆದ ನಂತರ ರೂ.1,00,000/- ಹಣವನ್ನು ಪಂಚಾಯಿತಿದಾರರು ಅಬ್ದುಲ್ ಕರೀಂಸಾಬ್ ರವರಿಗೆ ನೀಡಿರುತ್ತಾರೆ. ಭದ್ರಾವತಿಯಲ್ಲಿ ಮೋಹನ್ ವೇಲುರವರ ದಾಖಲೆಯನ್ನು ಬರವಣಿಗೆ ಮಾಡಿಸಲಾಯಿತು. ಸದರಿ ದಾಖಲೆಗೆ ಚಂದ್ರಶೇಖರ್, ಶಿವಣ್ಣ, ಸಾಜ್ಜನ್ ಸಾಬ್ ಹಾಗೂ ಹನುಮಂತರಾವ್ ರವರು ಸಹಿ ಮಡಿರುತ್ತಾರೆ. ಕರೀಂಸಾಬ್ ರವರು ಕನ್ನಡ ಭಾಷೆಯಲ್ಲಿ ದಾಖಲೆಗೆ ಸಹಿ ಮಾಡಿರುತ್ತಾರೆ. ಪ್ರತಿವಾದಿ 2 ರಿಂದ 5 ರವರು ಸಹ ಮಾಡಿರುತ್ತಾರೆ. ಒಟ್ಟು 2 ಕರಾರುಪತ್ರಗಳನ್ನು

ಬರೆಯಲಾಗಿದ್ದು ರೂ.1,00,000/- ಗಳಿಗೆ ಒಂದು, ಇನ್ನೊಂದು ರೂ.5,00,000/-ಗಳಿಗೆ ಹಾಗೂ ಉಳಿದ ರೂ.50,000/- ಗಳಿಗೆ ಶರಾ ಬರೆಯಲಾಗಿದೆ. ಒಟ್ಟು ರೂ.6,70,000/- ಹಣವನ್ನು ನಾವು ಸಂದಾಯ ಮಾಡಿರುತ್ತೇವೆ.

7. ಕರಾರುಪತ್ರವನ್ನು ಮಾಡಿದಾಗ 15 ವರ್ಷ ಪರಭಾರೆ ಮಾಡಬಾರದು ಎನ್ನುವ ನಿಯಮ ಚಾಲ್ತಿಯಲ್ಲಿತ್ತು ಎಂದರೆ ಸರಿ . ಸದರಿ ನಿಯಮ ಇರುವ ಬಗ್ಗೆ ನಮಗೆ ಮಾಹಿತಿ ಇದ್ದರೂ ದಾವಾಸ್ವತ್ತನ್ನು ಖರೀದಿ ಮಾಡಿರುತ್ತೇವೆ. ಕರಾರುಪತ್ರಗಳಲ್ಲಿ ನಿಭಂಧನೆಗಳನ್ನು ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ಕರಾರುಪತ್ರಗಳಲ್ಲಿ ಬರೆದಿರುವ ವಿಷಯಗಳು ನನಗೆ ಸರಿಯಾಗಿ ಗೊತ್ತಿಲ್ಲ. ದಾವಾಸ್ವತ್ತು ಕರೀಂಸಾಬ್ ರವರ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಸ್ವಾಧೀನವನ್ನು ನಮಗೆ ನೀಡಿರುವ ಬಗ್ಗೆ ಕರಾರುಪತ್ರದಲ್ಲಿ ಬರೆಯಲಾಗಿದೆ. ಕರಾರುಪತ್ರದಲ್ಲಿ ಸ್ವಾಧೀನವನ್ನು ಕರೀಂಸಾಬ್ ರವರು ಉಳಿಸಿಕೊಂಡಿರುವ ಬಗ್ಗೆ ಒಕ್ಕಣಿಕೆ ಇದೆ ಎಂದರೆ ಸುಳ್ಳು .

8. ಕರಾರುಪತ್ರಗಳನ್ನು ಬರೆಸುವಾಗ ಪಹಣಿ, ಕಂದಾಯ ರಿಸೀದಿಗಳು ಹಾಗೂ ಮ್ಯುಟೇಶನ್ ಗಳನ್ನು ನೋಡಿರುತ್ತೇವೆ. ಸ. ನಂಃ 42 ರಲ್ಲಿ ಒಟ್ಟು 534 ಎಕರೆ ಜಮೀನು ಇರುವ ಕಾರಣ ಅದರ ಸರ್ವೆ ಮಾಡಲು ಆಗುತ್ತಿಲ್ಲ ಎಂದರೆ ಸುಳ್ಳು . ನಾವು ಸದರಿ ಜಮೀನಿನ ಸರ್ವೆ ಮಾಡಲು ಅರ್ಜಿ ನೀಡಿರುವುದಿಲ್ಲ. ವಾದಿಯವರಿಗೆ ಮಾಡಲು ಹೇಳಿದ್ದೆವು. ನಾವು ಸರ್ವೆ ಇಲಾಖೆಯಲ್ಲಿ ಸರ್ವೆ ವಿಳಂಬವಾದ ಬಗ್ಗೆ ವಿಚಾರಣೆ ಮಾಡಿರುತ್ತೇವೆ. ಸರ್ವೆ ಇಲಾಖೆಯಿಂದ ದಾವಾ ಸ್ವತ್ತಿನ ಸರ್ವೆ ಮಾಡುವುದು ವಿಳಂಬವಾದ ಕಾರಣ ಖಾಸಗೀ ಸರ್ವೆ ಮಾಡಿಸಲು ಪ್ರಯತ್ನಿಸಿರುತ್ತೇವೆ ಎಂದರೆ ಕರೀಂಸಾಬ್ ರವರು ಮಾಡಿಸಿರುತ್ತಾರೆ ಎಂದು ಹೇಳಿದ್ದರು. ದಾವಾಸ್ವತ್ತು ಅಳತೆ ಮಾಡಿಸಿದ ಮೇಲೆ 15 ಗುಂಟೆ ಜಾಸ್ತಿ ಇದೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿ . ಅದಕ್ಕೆ ಹೆಚ್ಚಿನ ಹಣವನ್ನು ನಮ್ಮಿಂದ ಪಡೆದಿರುತ್ತಾರೆ.

9. ದಿಃ 15.06.2011 ರಂದು ಪಂಚಾಯಿತಿಯಾಗಿ ಆದರಲ್ಲಿ ಹೆಚ್ಚಿನ ಹಣ ನೀಡುವ ತೀರ್ಮಾನವಾಗಿರುತ್ತದೆ. ನಾವು ಒಟ್ಟು ರೂ.6,70,000/- ಹಣವನ್ನು ಪ್ರತಿವಾದಿಗಳಿಗೆ ಸಂದಾಯ ಮಾಡಿರುತ್ತೇವೆ. ಇನ್ನೂ ಬಾಕಿ ರೂ.1,00,000/- ಕೊಡಬೇಕಾಗಿರುತ್ತದೆ. ಕರೀಂಸಾಬ್ ರವರು ಪೋಡಿ ಮಾಡಲು ಅರ್ಜಿಯನ್ನು ನೀಡಿದಾಗ ಸರ್ಕಾರದ ನಿಯಮ ಉಲ್ಲಂಘನೆ ಮಾಡಿದ ಕಾರಣ ಅರ್ಜಿ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ಯಾವ ಕಾರಣಕ್ಕಾಗಿ ವಿಳಂಬವಾಗಿದೆ ಎಂದು ನಾವು ಸಂಬಂಧಪಟ್ಟ ಕಛೇರಿಯಲ್ಲಿ ವಿಚಾರಣೆ ಮಾಡಿರುವುದಿಲ್ಲ. ನಾವು ಸರ್ವೆ ಇಲಾಖೆಯವರಿಗೆ ವಿಚಾರಣೆ ಮಾಡಿರುವುದಿಲ್ಲ ಆದರೆ ಕರೀಂಸಾಬ್ ರವರಿಗೆ ಕೇಳಿರುತ್ತೇವೆ. ನಾವು ಕ್ರಯಪತ್ರ ಬರೆಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸುಳ್ಳು .

10. ನನ್ನ ತಂದೆ ಈ ದಾವೆಯನ್ನು ದಾಖಲು ಮಾಡುವ ಮೊದಲು ಪ್ರತಿವಾದಿಗಳಿಗೆ ವಕೀಲರ ಮುಖಾಂತರ ಕ್ರಯಪತ್ರ ಬರೆದುಕೊಡಲು ನೋಟಿಸ್ ನೀಡಿದ್ದರು. ಕರಾರುಪತ್ರಕ್ಕೆ 5 ನೆ ಪ್ರತಿವಾದಿ ಮಿಲಿಟರಿಯಲ್ಲಿದ್ದ ಕಾರಣ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ನನ್ನಅಣ್ಣ ಮಹಂತೇಶ್ ಖಾಲಿ ಸ್ಟಾಂಪ್ ಪೇಪರ್ ಗೆ ಕರೀಂಸಾಬ್ ರವರಿ ಸಹಿ ಪಡೆದಿರುತ್ತೇವೆಂದರೆ ಸುಳ್ಳು . ಕರೀಂಸಾಬ್ ರವರಿಗೆ ನನ್ನ ತಂದೆಯ ಮೇಲೆ ನಂಬಿಕೆ ಇದ್ದ ಕಾರಣ ಪತ್ರಕ್ಕೆ ಸಹಿ ಮಾಡಿದ್ದರು ಎಂದರೆ ಸುಳ್ಳು . ನಂತರ ನಾವು ನಮಗೆ ಬೇಕಾದ ಹಾಗೇ ಕರಾರುಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸುಳ್ಳು. ಕರಾರುಪತ್ರ ಆಗುವ ಕಾಲಕ್ಕೆ ಕರೀಂಸಾಬ್ ರವರಿಗೆ ಎಷ್ಟು ವರ್ಷ ವಯಸ್ಸು ಇತ್ತು ಎಂದು ನನಗೆ ಗೊತ್ತಿಲ್ಲ. ಆಗ ಅವರಿಗೆ 75 ವರ್ಷ ವಯಸ್ಸಾಗಿತ್ತು ಎಂದರೆ ಗೊತ್ತಿಲ್ಲ. ಕರೀಂಸಾಬ್ ರವರ ಆರೋಗ್ಯ ಕ್ಷೀಣಿಸಿದ ಕಾರಣ ಕರಾರುಪತ್ರವನ್ನು ಬರೆದು 1 ನೆ ಪ್ರತಿವಾದಿಯವರ ಸಹಿ ಪಡೆಯಲಾಯಿತು ಎಂದರೆ ಸುಳ್ಳು . ನಂತರ ಅವರ ಮಕ್ಕಳ ಹತ್ತಿರ ಅವರ ತಂದೆ ಸಹಿ ಮಾಡಿದ ಕಾರಣ ಸಹಿ ಪಡೆದಿರುತ್ತೇವೆಂದರೆ ಸುಳ್ಳು .

11. ನಾವು ವಕೀಲರ ಮೂಲಕ ನೀಡಿರುವ ನೋಟಿಸಿಗೆ ಕರೀಂಸಾಬ್ ರವರು ಯಾವುದೆ ಉತ್ತರ ನೀಡಿರುವುದಿಲ್ಲ. ಕರಾರುಪತ್ರ ಆದ ಮೇಲೆ 2018 ರಲ್ಲಿ ಕರೀಂಸಾಬ್ ರವರಿಗೆ ನೋಟಿಸ್ ನೀಡಿರುತ್ತೇವೆ. ಕರಾರುಪತ್ರದಂತೆ ಕ್ರಯಪತ್ರ ಮಾಡಿಸಿಕೊಳ್ಳಲು ನಾವು ಪ್ರಾಮಾಣಿಕ ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸುಳ್ಳು . ನಾವು ಕಾಲ ವಿಳಂಬ ಮಾಡಿ ಪ್ರತಿವಾದಿಯವರಿಗೆ ನೋಟಿಸ್ ನೀಡಿ ಈ ದಾವೆ ಸಲ್ಲಿಸಿರುತ್ತೇವೆ ಎಂದರೆ ಸುಳ್ಳು. ನಾವು ಕೇಳಿರುವ ಪರಿಹಾರ ಪಡೆಯಲು ಬಾದ್ಯಸ್ಥರಲ್ಲ ಎಂದರೆ ಸುಳ್ಳು . ಕರೀಂಸಾಬ್ ರವರ ಮಕ್ಕಳು ದಾವಾಸ್ವತ್ತಿನ ಸಾಗುವಳಿಯ ಮೇಲೆ ಜೀವನ ನಿರ್ವಹಣೆ ಮಾಡುತ್ತಾರೆ ಎಂದರೆ ಸುಳ್ಳು . ದಾವಾಸ್ವತ್ತನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನು ಪ್ರತಿವಾದಿಗಳಿಗೆ ಇಲ್ಲ ಎಂದರೆ ಸುಳ್ಳು. ಅವರ ಕುಟುಂಬದ ನಿರ್ವಹಣೆ ದಾವಾಸ್ವತ್ತಿನ ಮೇಲೆ ಅವಲಂಬಿತವಾಗಿದೆ ಎಂದರೆ ಸುಳ್ಳು . ಪ್ರತಿವಾದಿಗಳು ಯಾವತ್ತಿಗೂ ದಾವಾಸ್ವತ್ತನ್ನು ಮಾರಾಟ ಮಾಡುವುದಾಗಿ ಹೇಳಿ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸುಳ್ಳು. ಪ್ರತಿವಾದಿಗಳಿಗೆ ತೊಂದರೆ ಕೊಡಲು ಜಹಾಗೂ ಹೆಚ್ಚಿನ ಹಣವನ್ನು ಪಡೆಯಲು ಈ ದಾವೆಯನ್ನು ದಾಖಲಿಸಿರುತ್ತೇವೆ ಎಂದರೆ ಸುಳ್ಳು .

ಮರು ವಿಚಾರಣೆಃಇಲ್ಲ.

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

***ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು-ಎಎಂಎಸಿಟಿ-11,***
***ಭದ್ರಾವತಿ.***